ಮೇಲೆ ಅದು ಅವರ ಹತೋಟಿಗೆ ಬರುತ್ತದೆ. ಅವರು ಹೇಳಿದ ಮೇಲೆ ಅವರ ಪರಿಶೀಲನಾ ಸಮಿತಿಯ ವರದಿ ಆಧಾರದ ಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ, ಅದಕ್ಕೆ ನಾವು ಬದ್ಧರಾಗಿದ್ದೇವೆ. ಶ್ರೀ ಬೊಮ್ಮಾಯಿಯವರು ಈ ಬಗ್ಗೆ ಒಂದು ಮಾತು ಹೇಳಿದ್ದಾರೆ. ಇದು ನಡೆಯುತ್ತದೆ ಇದು ನಿಮಗೆ ಗೊತ್ತಿದೆ. ಈ ಸಲ ಹೇಳಿದ್ದೇವೆ. ಮೊದಲಿನಿಂದಲೂ ಬಹಳ ಕಟ್ಟುನಿಟ್ಟಾಗಿ ಮೇಲಿಂದ ಮೇಲೆ ನಮ್ಮ ಅಧಿಕಾರಿಗಳಿಗೆ ಹೇಳಿದ್ದೇವೆ ಅವರು ತಪಾಸಣೆಗೆ ಕಳುಹಿಸಿಕೊಟ್ಟು ಮೇಲಿಂದ ಮೇಲೆ ವರದಿ ತರಿಸಿ ಕೊಂಡು ವರದಿಯ ಆಧಾರದ ಮೇಲೆ ವಿಶ್ವವಿದ್ಯಾಲಯಗಳಿಗೆ ಹೇಳಿದ್ದೇವೆ. ಪರಿಶೀಲನಾ ಸಮಿತಿಯನ್ನು ಕಳುಹಿಸಿದ ಮೇಲೆ ಆ ವರದಿ ಬರಲಿ, ಅಂತಹ ಕಾಲೇಜುಗಳಿಗೆ ಅನುಮತಿಯನ್ನು ನಿರಾಕರಿಸುತ್ತೇವೆ ಎನ್ನ ತಕ್ಕ ಮಾತನ್ನು ನಾನು ಹೇಳಿದ್ದೇನೆ. ಇವತ್ತು ಕೂಡ ನಾನು ಈ ವಿಚಾರದಲ್ಲಿ ಭರವಸೆಯನ್ನು ಕೊಡು ತ್ತಿದ್ದೇನೆ, ಅಂತಹ ಕಾಲೇಜುಗಳು ರಾಜ್ಯದಲ್ಲಿ ಅಸ್ತಿತ್ವಕ್ಕೆ ಬರುವುದಕ್ಕೆ ಸಾಧ್ಯವಿಲ್ಲ

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಒಂದೇ ಒಂದು ವಿಷಯ ಕೇಳುತೆ ೇನೆ. ಪರಿಷ್ಕರಣ ನಿಯಮ ಗಳನ್ನು ಹೊರಡಿಸಿ ಆ ಬಗ್ಗೆ ಯುಜಿಸಿಯಲ್ಲಿ ಆದೇಶ ಕಳುಹಿಸಿದೆ. ಅದಲ್ಲದೇ ಈ ಪ್ರವೇಶ ಮತ್ತು ಸಂಖ್ಯೆಗಳ ವಿಚಾರದಲ್ಲಿ ಕೂಡ ನಿಯಮಗಳನ್ನು ಮಾಡಿದ್ದಾರೆ. ನಂತರ ವಿಶ್ವವಿದ್ಯಾನಿಲಯಗಳ ಉಪ ಕುಲಪತಿಗಳು ಮತ್ತು ಪ್ರಾಚಾರ್ಯರು ಎಲ್ಲಾ ವಿಚಾರಗಳನ್ನು ತಿಳಿದುಕೊಂಡಮೇಲೆ ಪರಿಷ್ಕೃತ ನಿಯಮಗಳನ್ನು ಕರ್ನಾಟಕ ಯೂನಿವರ್ಸಿಟಿ ಆಕ್ಟ್ ಪ್ರಕಾರ ನೀವು ರೆಗ್ಯುಲರೈಸ್ ಮಾಡಿದ್ದೀರಾ? ಮಾಡಿದ್ದರೆ This is the crux of the matter. ನೀವು ಮಾಡಿದ್ದೀರಾ ಇಲ್ಲವೇ ಅದನ್ನು ಇಲ್ಲಿ ಹೇಳಿ ನೋಡೋಣ.

ಶ್ರೀ ಜಿ.ಬಿ. ಶಂಕರರಾವ್.—ಸರ್ಕಾರದವರು ನಿಯಮಗಳನ್ನು ಮಾಡಿ ಎಲ್ಲಾ ವಿಶ್ವ ವಿದ್ಯಾನಿಲಯ ಗಳಿಗೆ ನಿಯಮಗಳ ಪ್ರಕಟಣೆಯನ್ನು ಕಳುಹಿಸಿದ ಮೇಲೆ ಅದು ವಿಶ್ವವಿದ್ಯಾನಿಲಯದವರ ಕೆಲಸ. ಅವರು ನಿಯಮಗಳನ್ನು ಸಿಂಡಿಕೇಟ್ ಮತ್ತು ಅಕಾಡಮಿಕ್ ಕೌನ್ಸಿಲ್ ಮುಂದೆ ಇಟ್ಟು ಒಪ್ಪಿಕೊಂಡು ರೆಸಲ್ಯೂ ಷನ್ ಮಾಡಿ ಕಳುಹಿಸುವುದನ್ನು ನಿಧಾನ ಮಾಡಿದ್ದಾರೆ, ಆ ಕಾರಣಕ್ಕೆ ತೊಂದರೆಯಾಗಿರಬಹುದು. No it is not my fault.

SRI A. LAKSHMISAGAR.—Revised directions have been issued.

G. B. SHANKAR RAO.—I am also an Advocate like you.

SRI A LAKSHMISAGAR.—Who is at fault now? This has been happening continuously for several years. Have you taken any action against such officers?

SRI G. B SHANKAR RAO.—These are all the rules which the academic body have to adhere strictly. These rules have the force of law. When once they are adopted and sent as regulations, they will have the force of law. University authorities took lot of time in adopting these rules and they became regulations very lote. I am not responsible for that We are working in a democratic set up where we have got Syndicate, academic Council etc., I cannot force them. We have been writing to them through the Vice Chancellors to the Chancellors. But somehow it is not seriously taken note of. This year I have been able to see that these rules have been adopted by way of regulation and have become the force of law now.

ವಿಷಯ.—ಪಶುವೈದ್ಯ ವಿದ್ಯಾರ್ಥಿಗಳು ಹೂಡಿರುವ ಮುಷ್ಕರದ ಬಗ್ಗೆ.

ಶ್ರೀ ಕೆ ಎಚ್. ಹನುಮೇಗೌಡ.—ಪಶುವೈದ್ಯ ವಿದ್ಯಾರ್ಥಿಗಳು ಹೂಡಿರುವ ಮುಷ್ಕರದಿಂದ ಉದ್ಭವಿಸಿರುವ ವಿಚಾರವನ್ನು ಮಾನ್ಯ ಸಂಸದೀಯ, ಕಾನೂನು ಪಶುವೈದ್ಯ ಇಲಾಖಾ ಮಂತ್ರಿಗಳ ಗಮನವನ್ನು ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ವೈ. ರಾಮಕೃಷ್ಣ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪಶು ಸಂಗೋಪನಾ ಸಚಿವರು)—ಸಾರ್ವಜನಿಕ ಸೇವೆಯ ಮಹತ್ವದ ಕ್ಷೇತ್ರಗಳಲ್ಲಿ ಒಂದಾದ ಪಶುವೈದ್ಯಕೀಯ ಮತ್ತು ಪಶು ಸಂಪತ್ತಿನ ಅಭಿವೃದ್ಧಿಯನ್ನು ಪರಿಣಾಮಕಾರಿಯಾಗಿ ಸಾಧಿಸುವ ದೃಷ್ಟಿಯಿಂದ ರಾಜ್ಯದ ಪಶುವೈದ್ಯಕೀಯ ಮತ್ತು ಪಶು ಸಂಗೋಪನಾ ಇಲಾಖೆಯನ್ನು ಬಹು ದಿನಗಳಿಂದಲೂ ಪುನರ್ ಘಟಿಸ ಬೇಕಾಗಿದ್ದ ವಿಚಾರ ಕೆಲವು ಕಾಲದಿಂದ ಸರಕಾರದ ತೀವ್ರ ಪರಿಯಾಲೋಚನೆಯಲ್ಲಿದೆ. ಕೇಂದ್ರ ಮಂತ್ರಿ ರಾಜ್ಯ ಸರ್ಕಾರಗಳು ಪ್ರಾರಂಭಿಸಿರುವ ವಿಶ್ವ ಬ್ಯಾಂಕ್ ನೆರವಿನ ಹೈನುಗಾರಿಕೆ ಅಭಿವೃದ್ಧಿ ಯೋಜನೆ ಮತ್ತು ಭಾರತೀಯ ಹೈನುಗಾರಿಕೆ ನಿಗಮದೊಡನೆ ಇತ್ತೀಚೆಗೆ ಮಾಡಿಕೊಂಡ ಒಪ್ಪಂದದಂತೆ "ಕ್ಷೀರ ಕ್ರಾಂತಿ ಯೋಜನೆ–೨" (ಆಪರೇಷನ್ ಪ್ಲಡ್ ಟು) ಮೊದಲಾದ ಯೋಜನೆಗಳಿಂದಾಗಿ ಸರಕಾರ ಈ ಕ್ಷೇತ್ರದ ಅಭಿವೃದ್ಧಿಗೆ ತೀವ್ರವಾದ ಗಮನವನ್ನು ನೀಡುತ್ತಿದೆ. ಇದರಿಂದಾಗಿ ಈ ಇಲಾಖೆಯ ಪುನರ್ ಘಟನೆಯ ಮಹತ್ವ ಇಂದು ಇಂದೆಂದಿಗಿಂತಲೂ ಹೆಚ್ಚಾಗಿದೆ.

ಪಶು ಸಂಪತ್ತಿನ ಅಭಿವೃದ್ಧಿ ನಮ್ಮ ಜನಸಂಖ್ಯೆಯ ಪೌಷ್ಟಿಕಾಂಶಗಳ ಮಟ್ಟದ ಮೇಲೆ ಬೀರುವ ಪರಿಣಾಮ ಬಹಳ ತೀವ್ರವಾದದು. ಆದ್ದರಿಂದ ಪಶುಸಂಗೋಪನಾ ಇಲಾಖೆಯ ದಕ್ಷತೆಯನ್ನು ಗಮನಾರ್ಹವಾಗಿ ಹೆಚ್ಚಿಸಿ ಅದು ಗ್ರಾಮಾಂತರ ಪ್ರದೇಶಗಳನ್ನು ತಲುಪುವುದರ ಜೊತೆಗೆ ಸಾಕಷ್ಟು ಉತ್ತಮವಾದ ಪ್ರತಿಭೆಯನ್ನು ಈ ಇಲಾಖೆಗೆ ದೊರಕಿಸಿಕೊಳ್ಳಲು ಸರ್ಕಾರ ಕಾತುರವಾಗಿದೆ. ಈ ಎರಡು ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಈ ಇಲಾಖೆಯ ಸಮಗ್ರ ಪುನರ್ ಸಂಘಟನೆಯನ್ನು ಅತಿ ಶೀಘ್ರವಾಗಿ ಘೋಷಿಸಲಿದೆ. ಇವತ್ತೇ ನನ್ನ ಡಿಮಾಂಡ್‌ನಲ್ಲಿ ಘೋಷಿಸುತ್ತೇನೆ. ಈ ಪುನರ್ ಸಂಘಟನೆಯನ್ನು ಮಾಡುವಾಗ ನಮ್ಮ ಅಗತ್ಯಗಳನ್ನು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಅವಶ್ಯಕತೆಯನ್ನು ಪೂರ್ಣವಾಗಿ ಅಧ್ಯಯನ ನಡೆಸಲಾಗಿದೆ.

ಪಶು ವೈದ್ಯಕೀಯ ಪದವೀಧರರು ಸರಕಾರಿ ಸೇವೆಯನ್ನು ಪ್ರವೇಶಿಸುವಾಗ ಸರ್ಕಾರ ಅವರಿಗೆ ಸೂಕ್ತವಾದ ವೇತನ ಶ್ರೇಣಿಯನ್ನು ನೀಡುವುದು ಈ ಮೇಲೆ ಹೇಳಿದ ಸಮಗ್ರ ಪುನರ್ ಸಂಘಟನೆಯ ಒಂದು ಭಾಗವಾಗಿರುತ್ತದೆ. ಈ ವಿಷಯ ಈಗ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಮತ್ತು ಆದಷ್ಟು ಬೇಗ ಸರ್ಕಾರದ ತೀರ್ಮಾನವನ್ನು ಪ್ರಕಟಿಸಲಾಗುವುದು. ಈ ಮಧ್ಯೆ ಪಶು ವೈದ್ಯಕೀಯ ಇಲಾಖೆಯಲ್ಲಿ ಪಶುವೈದ್ಯಕೀಯ ಸಹಾಯಕ ಸರ್ಜನ್‌ರ ಅನೇಕ ಹುದ್ದೆಗಳು ಖಾಲಿ ಇರುವುದರಿಂದ ಸರ್ಕಾರ ಪ್ರವೇಶ ಮಟ್ಟದಲ್ಲಿ ಅವರ ವೇತನ ಶ್ರೇಣಿಯನ್ನು ಹೆಚ್ಚಿಸಲು ತೀರ್ಮಾನಿಸಿದೆ. ಇತ್ತೀಚೆಗಷ್ಟೆ ವೇತನ ಶ್ರೇಣಿಗಳ ಸಾಮಾನ್ಯ ಪರಿಷ್ಕರಣೆಯಾದಾಗ ವೇತನವನ್ನು ೬೬೦–೧೩೦೦ ರಿಂದ ೯೨೦–೧೭೭೫ಕ್ಕೆ ಹೆಚ್ಚಿಸಲಾಗಿತ್ತು. ಆದಾಗ್ಯೂ ಈ ಏರಿಕೆ ಪಶು ವೈದ್ಯರಲ್ಲಿ ಸಮಾಧಾನ ಕಂಡಂತೆ ಬರಲಿಲ್ಲ. ಈ ಇಲಾಖೆಯ ಪಶುವೈದ್ಯರು ಮುಂದೆ ನಿರ್ವಹಿಸಬೇಕಾಗಿರುವ ಗುರುತರವಾದ ಜವಾಬ್ದಾರಿಯನ್ನು ಮನನ ಮಾಡಿಕೊಂಡು ರಾಜ್ಯದ ಜಾನುವಾರುಗಳ ಅಭಿವೃದ್ಧಿ ಹಾಗೂ ಹೈನುಗಾರಿಕಾಭಿವೃದ್ಧಿಗೆ ಹೆಚ್ಚು ಶ್ರದ್ಧೆ ವಹಿಸುವರೆಂದು ನಂಬಿ ಸರ್ಕಾರ ಇವರ ಮೂಲ ವೇತನವನ್ನು ೧೧೦೦–೨೦೨೫ಕ್ಕೆ ಹೆಚ್ಚಿಸಲಾಗಿದೆ ಎಂದು ತಿಳಿಸಲು ನಾನು ಸಂತೋಷ ಪಡುತ್ತೇನೆ. ಇದೊಂದು ಪಶು ಸಂಗೋಪನಾ ಇಲಾಖೆಯ ಚರಿತ್ರೆಯಲ್ಲಿ ಚಿರ ಸ್ಮರಣೀಯ ಹಾಗೂ ಚರಿತ್ರಾರ್ಹವಾದ ವಿಷಯ. ಈಗ ನಮ್ಮ ರಾಜ್ಯದಲ್ಲಿ ಪಶು ವೈದ್ಯಕೀಯ ಸಹಾಯಕ ಸರ್ಜನ್‌ರ ವೇತನ ಶ್ರೇಣಿ ಪ್ರವೇಶ ಹಂತದಲ್ಲಿ ಇತರ ಎಲ್ಲಾ ರಾಜ್ಯಗಳಿಗಿಂತ ಹೆಚ್ಚಾಗಿ ಕೊಡಲಾಗಿದೆ ಎಂದು ತಿಳಿಸಲು ನಾನು ಸಂತೋಷಪಡುತ್ತೇನೆ. ಪಶುವೈದ್ಯರ ಬಹಳ ದಿನಗಳಿಂದ ಬಾಕಿ ಇರುವ ಅವರ ಬೇಡಿಕೆಗಳನ್ನು ಸಂಪೂರ್ಣವಾಗಿ ಅರಿತು ಈ ತೀರ್ಮಾನ ಕೈಗೊಳ್ಳಲಾಗಿದೆ.

ಭಾರತದ ನಿಜವಾದ ಸಂಪತ್ತು ಹಳ್ಳಿಗಳಲ್ಲಿವೆ. ಭಾರತಕ್ಕೆ ರೈತರೇ ಜೀವಾಳ. ಅವರು ತಮ್ಮ ಜೀವನಕ್ಕೂ, ವೃತ್ತಿಗೂ ಜಾನುವಾರುಗಳನ್ನು ಅವಲಂಬಿಸುತ್ತಾರೆ. ಆದಂದರಿಂದ ಅವರ ಶ್ರೇಯೋಭಿವೃದ್ಧಿ ಆಗಬೇಕಾದರೆ ಜಾನುವಾರುಗಳ ಅಭಿವೃದ್ಧಿ ಆಗತ್ಯ. ಈ ದೃಷ್ಟಿಯಿಂದ ಪಶುವೈದ್ಯರ ಸೇವೆ ಅತ್ಯಗತ್ಯ. ಇದನ್ನು ಗಮನಿಸಿ ಮೇಲೆ ಹೇಳಿದ ಯೋಜನೆಯನ್ನು ಹಾಕಿಕೊಳ್ಳಲಾಗಿದೆ.

ಈ ತೀರ್ಮಾನ ಕೈಗೊಳ್ಳಲು ಮುಖ್ಯ ಕಾರಣ ಕರ್ತರಾದ ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಆರ್. ಗುಂಡೂರಾಯರಿಗೆ ಮತ್ತು ಈ ಹಣಕಾಸಿನ ಸಚಿವರಾದ ಮೊಯಿಲಿಯವರಿಗೆ ಈ ಸದನದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಮಾನ್ಯ ಸಭೆಯ ಎಲ್ಲಾ ಪಕ್ಷದ ಸದಸ್ಯರು ಅನೇಕ ಭಾರಿ ಈ ಮೇಲ್ಕಂಡ ವಿಷಯವನ್ನು ಈ ಮಾನ್ಯ ಸಭೆಯ ಗಮನಕ್ಕೆ ತಂದು ಈ ತೀರ್ಮಾನ ಕೈಗೊಳ್ಳಲು ಕಾರಣಕರ್ತರಾಗಿದ್ದಾರೆ. ಎಲ್ಲರಿಗೂ ನನ್ನ ಅಭಿನಂದನೆಗಳು.

೪–೩೦ ಪಿ. ಎಂ.

ಶ್ರೀ ಎ. ಲಕ್ಷ್ಮೀಸಾಗರ್.—ಈ ತೀರ್ಮಾನವನ್ನು ಯಾವಾಗ ಜಾರಿಗೆ ಕೊಡುತ್ತೀರಿ ?

ಶ್ರೀ ವೈ. ರಾಮಕೃಷ್ಣ.—ಇದು ತಾ॥ ೧–೮–೧೯೮೨ ರಿಂದ ಜಾರಿಗೆ ಬರುತ್ತದೆ.

ಶ್ರೀ ಕೆ. ಎಚ್. ಹನುಮೇಗೌಡ.—ಈ ಕೆಲಸ ಅನೇಕ ವರ್ಷಗಳಿಂದ ಆಗಿರಲಿಲ್ಲ. ಈ ವೇತನ ಶ್ರೇಣಿಯನ್ನು ಇವರಿಗೆ ಕೊಡಲು ಕೆಲವರ ವಿರೋಧವಿದ್ದರೂ ಸಹ ಅದನ್ನು ಗಣನೆಗೆ ತಗೆದು ಕೊಳ್ಳದೆ ಗ್ರಾಮಾಂತರ ಪ್ರದೇಶಗಳ ರೈತರ ಹಿತದೃಷ್ಟಿಯಿಂದ ಹಾಗೂ ಜಾನುವಾರುಗಳ ಹಿತದೃಷ್ಟಿಯಿಂದ ಈ ಒಂದು ಉತ್ತಮವಾದ ಕಾರ್ಯವನ್ನು ಮಾಡಿದ್ದಾರೆ. ಆದ್ದರಿಂದ ಮುಖ್ಯ ಮಂತ್ರಿಗಳಾದ ಶ್ರೀ ಗುಂಡೂರಾವ್ ಅವರಿಗೆ, ಶ್ರೀ ವೈ. ರಾಮಕೃಷ್ಣ ಅವರಿಗೆ ಹಾಗೂ ಮಾನ್ಯ ವೀರಪ್ಪಮೊಯ್ಲಿ ಅವರಿಗೆ ಪಶುವೈದ್ಯಕೀಯ ಡಾಕ್ಟರ್‌ಗಳ ಪರವಾಗಿ ಮತ್ತು ಈ ರಾಜ್ಯದ ರೈತರ ಪರವಾಗಿ ಅಭಿನಂದಿಸುತ್ತೇನೆ,

ಶ್ರೀ ಎಸ್. ಆರ್. ಬೊಮ್ಮಾಯಿ.—ಇದೊಂದು ಸಂತೋಷದ ಸಂಗತಿ. ಮಾನ್ಯ ಮಂತ್ರಿಯವರು ಹುಸಿ ಭರವಸೆ ಕೂಡದೆ ಹಸಿ ಭರವಸೆ ಕೊಟ್ಟು ಇವರಿಗೆ ದೊಡ್ಡ ಉಪಕಾರ ಮಾಡಿದ್ದಾರೆ.

ಶ್ರೀ ಬಿ. ವಿ. ಕಕ್ಕಿಲಾಯ.—ಸರ್ಕಾರದವರು ಒಳ್ಳೆಯ ಕೆಲಸ ಮಾಡಿದ್ದಾರೆ. ಬಹಳ ಸಂತೋಷ. ಆದರೆ ನಮ್ಮ ಜಿಲ್ಲೆಯಲ್ಲಿ ಇನ್ನೂ.....

ಅಧ್ಯಕ್ಷರು.—ಅದನ್ನೆಲ್ಲಾ ಅವರು ತಮ್ಮ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ ಕೊಡುವಾಗ ಹೇಳುತ್ತಾರೆ.

ಶ್ರೀ ವೈ. ರಾಮಕೃಷ್ಣ.—ಈ ಇಲಾಖೆಯ ಸಮಗ್ರ ಪುನರ್ ಸಂಘಟನೆ ಮಾಡಬೇಕಾಗಿದೆ. ಅದನ್ನು ಯಾವ ರೀತಿ ಮಾಡಲಾಗುತ್ತದೆಂಬುದನ್ನು ನನ್ನ ಉತ್ತರದಲ್ಲಿ ಹೇಳುತ್ತೇನೆ.

Matter Under Rule 312

Re:—Delay in announcing results of VIII and IX Standard Examinations of Govt. High School at Kananur

ಶ್ರೀ ಎ. ಲಕ್ಷ್ಮೀಸಾಗರ್.— ಕೊಣನೂರಿನ ಪ್ರೌಢಶಾಲೆಯು ೮ ಮತ್ತು ೯ನೇ ತರಗತಿಗಳ ಪರೀಕ್ಷಾ ಫಲಿತಾಂಶವನ್ನು ಇಲ್ಲಿಯವರೆಗೆ ಪ್ರಕಟಣೆ ಮಾಡಿಲ್ಲ. ಇದಕ್ಕೆ ಮುಖ್ಯವಾದ ಕಾರಣವೆಂದರೆ, ಕನ್ನಡ, ಸಂಸ್ಕೃತ ಸಸ್ಯ ಶಾಸ್ತ್ರಗಳಿಗೆ ಸಂಬಂಧಪಟ್ಟಂತೆ ಈ ಶಾಲೆಯಲ್ಲಿ ಉಪಾಧ್ಯಾಯರುಗಳೇ ಇಲ್ಲದ ಕಾರಣ ಈ ವಿಷಯಗಳಿಗೆ ಸಂಬಂಧಪಟ್ಟಂತೆ ಪರೀಕ್ಷೆಗಳನ್ನೇ ಮಾಡಲಿಲ್ಲ. ಇದರಿಂದ ಸುಮಾರು ೫೦೦ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ತೊಂದರೆಯಾಗಿದೆ. ಇಂತಹ ಒಂದು ಅವ್ಯವಸ್ಥೆ ಆಲ್ಲಿ ಬರಬೇ ಕಾದರೆ ಸರ್ಕಾರದವರು ಆಲ್ಲಿಗೆ ಸಮಯಕ್ಕೆ ಸರಿಯಾಗಿ ಉಪಾಧ್ಯಾಯರುಗಳನ್ನು ನೇಮಕ ಮಾಡದೆ ವಿಳಂಬ ರೀತಿಯನ್ನು ಅನುಸರಿಸಿದ್ದೇ ಕಾರಣ, ಉಪಾಧ್ಯಾಯರುಗಳೇ ಇಲ್ಲದ ಕಾರಣ ಅಲ್ಲಿನ ವಿದ್ಯಾರ್ಥಿಗಳಿಗೆ ಸರಿಯಾಗಿ ತರಬೇತಿ ಮಾಡಲು ಸಾಧ್ಯವಾಗಲಿಲ್ಲ ಈ ಸಲದ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಈ ಶಾಲೆಗೆ ಸಂಬಂಧಪಟ್ಟಂತೆ ಶೇಕಡಾ ೬೦ ರಷ್ಟು ಫಲಿತಾಂಶ ಬಂದಿದೆ ಎಂದು ನನಗೆ ಸುದ್ದಿ ಬಂದಿದೆ: ಆದಕಾರಣ ೮ ಮತ್ತು ೯ನೇ ತರಗತಿಗಳಲ್ಲಿ ಯಾವ ಯಾವ ವಿಷಯಗಳಲ್ಲಿ ಪರೀಕ್ಷೆಗಳನ್ನು ಈ ಸಾಲಿನಲ್ಲಿ ನಡೆಸಿಲ್ಲವೋ ಆ ವಿಷಯಗಳಲ್ಲಿ ಕೂಡಲೇ ಪರೀಕ್ಷೆಗಳನ್ನ ನಡೆಸಿ ವಿದ್ಯಾರ್ಥಿಗಳು ಮುಂದಿನ ತರಗತಿಗಳಿಗೆ ಹೋಗುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀಮತಿ ನಾಗಮ್ಮ.—ಕೇಶವಮೂರ್ತಿ.—(ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು).

ಹಾಸನ ಜಿಲ್ಲಾ ಅರಕಲಗೂಡು ತಾಲ್ಲೂಕು ಕೊಣನೂರಿನಲ್ಲಿರುವ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರ ನಿರ್ಲಕ್ಷ್ಯತನದ ಕಾರಣ ೮ ಮತ್ತು ೯ನೇ ಇಯತ್ತೆಗಳ ವಾರ್ಷಿಕ ಪರೀಕ್ಷೆಯ ಫಲಿತಾಂಶಗಳನ್ನು ಪ್ರಕಟಿಸಲಾಗಲಿಲ್ಲವೆಂದು ವರದಿಯಾಗಿದೆ. ಈ ವಿಷಯ ತಿಳಿದ ಕೂಡಲೇ ಮೈಸೂರು ವಿಭಾಗದ ಸಹ ನಿರ್ದೇಶಕರು ಸದರಿ ಶಾಲೆಗೆ ೨–೭–೮೨ ರಂದು ಬೇಟಿಕೊಟ್ಟು ೮ ಮತ್ತು